ಫಾರೆಸ್ಟ್ ಇಲಾಖಾ.

ತಾರೀಖು 18ನೇ ಫಿಬ್ರವರೀ 1876.

ಕೊಡಗು ಫಾರೆಸ್ಟ್ ಇಲಾಖಾ ಸ್ವತ್ತಾದ 6½ ಅಡಿ ಎತ್ತರ ವುಳ್ಳ ಪುಮೂರು 14 ವರುಷ ಪ್ರಾಯದ ವೊಂದು ಗಂಡಾನೆಯು ಕೊಡಗು ಅಸಿಸ್ಟೆಂಟ್ ಕಂಸರ್ವೇಟರ್‌ರಯವರಿಂದ ಹುಣಸೂರಿನಲ್ಲಿ ಈ ಕೆಳಗೆ ಕಂಡ ತಾರೀಖಿನಲ್ಲಿಯೂ ಪರತ್ತುಗಳ ಮೇಲೂ ವಿಕ್ರಯಿಸಲ್ಪಡುವದು.

ಪರತ್ತುಗಳು—ನಗದು ವೊಬಲಗು, ಮತ್ತು ಕೂಡ್ಲೇ ಸಾಗಿಸತಕ್ಕದ್ದು.

ರಿಜಿಸ್ಟರ್ಡ್ ಮಾಡಲ್ಪಟ್ಟ ಮತ್ತು ಅರಗು ಮೊಹರ್ ಮಾಡಲ್ಪಟ್ಟ ಲಕ್ಕೋಟೆಗಳಲ್ಲಿ ಟಪ್ಪಾಲ್ ದ್ವಾರಾ ಕಳುಹಿಸಲ್ಪಟ್ಟ ದರಖಾಸ್ತುಗಳು ಅಸಿಸ್ಟೆಂಟ್ ಕಂಸರ್ವೇಟರ್‌ರಯವರಿಂದ ಅಂಗೀಕರಿಸಲ್ಪಡುವದು. ಸದರೀಯವರು 1876ನೇ ಇಸವಿ ಮಾರ್ಚೀ 20ನೇ ತಾರೀಖಿನಲ್ಲಿ ಹರಾಜ್ ನಡಿಸುವರು. ಈ ಲಕ್ಕೋಟೆಗಳು ಅಸಿಸ್ಟೆಂಟ್ ಕಂಸರ್ವೇಟರ್‌ರಯವರಿಂದಲೇ ಹರಾಜು ಸ್ಥಳದಲ್ಲಿ ರೂಬರೂ ಖುಲ್ಲಾ ಮಾಡಲ್ಪಡುತ್ತೆ, ಆನೇ ಬಗ್ಗೆ ಲೆಟ್ಟರ್ ಮೂಲಕ ದರಖಾಸ್ತು ಮಾಡುವ ಜನಗಳಿಂದ ದರಖಾಸ್ತು ಮಾಡಲ್ಪಟ್ಟ ಪೂರಾವೊಬಲಗಿಗೆ ಕರೆಸಿ ನೋಟೀಗಳನ್ನು ಅಂತಾ ಲೆಟ್ಟರ್‌ಗಳಲ್ಲಿ ಮಲಪೂಸೆ ಮಾಡಿ ಕಳುಹಿಸತಕ್ಕದ್ದು. ಮತ್ತು ಅಂತಾ ದರೋಬಸ್ತು ಕರೆಸಿ ನೋಟುಗಳು ಮುಂಜೂರಾಗದ ದರಖಾಸ್ತುದಾರುಗಳಿಗೆ ಅಸಿಸ್ಟೆಂಟ್ ಕಂಸರ್ವೇಟರಿಂದ ರಿಜಿಸ್ಟರ್ಡ್ ಮಾಡಲ್ಪಟ್ಟ ಮತ್ತು ಅರಗು ಮೊಹರ್ ಮಾಡಲ್ಪಟ್ಟ ಲಕ್ಕೋಟೆಗಳಲ್ಲಿ ಲೆಟ್ಟರ್ ಮೂಲಕ ಹರಾಜಿನ ಮಾರನೇದಿನ ಟಪ್ಪಾಲ್‌ನಲ್ಲಿ ವಾಪಸ್ ಕಳುಹಿಸಲ್ಪಡುವವು. ದರಖಾಸ್ತುದಾರುಗಳ ಹೆಸರು, ಮೇಲುವಿಳಾಸ, ಸ್ಪಷ್ಟವಾಗಿರುವ ಅಕ್ಷರದಲ್ಲಿ ಪೂರ್ತಿಯಾಗಿ ಬರದು ಇರತಕ್ಕದ್ದು.

ಸದರೀ ಆನೆಯು ವಿಕ್ರಯಿಸಲ್ಪಟ್ಟ ದಿನ ಸಾಯಂಕಾಲದ ತರುವಾಯ ಆದರನ್ನು ಇಟ್ಟುಕೊಳ್ಳುವದಕ್ಕಾಗಲಿ, ಮೇವು ಹಾಕುವದಕ್ಕಾಗಲಿ, ಫಾರೆಸ್ಟ್ ಇಲಾಖೆಯವರು ಯಿಪ್ಪು ಮಾತ್ರವೂ ಜವಾಬ್‌ದಾರರಾಗಿರುವದಿಲ್ಲವು.

ತಾರೀಖು 22ನೇ ಫಿಬ್ರವರೀ 1876.

ಇದರಿಂದ ತಿಳಿಸಲ್ಪಡುವದೇನಂದರೆ,—ಶಿವಮೊಗ್ಗಾ ಸ್ಥಳದ ನಂಜಣ್ಣನೆಂಬಾತನ ಮಾಲಾದ 50 ಕಾಡು ಮರದ ದಿಮ್ಮೀಗಳು, 9 ಕೂಜಗಳು ಸಹಾ, ಸದರೀ ಮರಗಳ ಬಾಬತು ಸರ್ಕಾರಕ್ಕೆ ಸಲ್ಲತಕ್ಕ ಕೋರೀ ಬಾಡಿಗೆಯನ್ನು ಭರ್ತೀ ಮಾಡಿಕೊಳ್ಳತಕ್ಕ ಬಗ್ಗೆ ಆಯನೂರು ಕೋರೀಯಲ್ಲಿ 1876ನೇ ಏಪ್ರಿಲ್ 15ನೇ ಮುಕ್ತಂ ಮಿನೊಳಗೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ಹರಾಜು ನಿಬಂಧನೆ—1873ನೇ ಇಸವಿ ಜೂನ್ 12ನೇ ಮುಕ್ತಂ 20ನೇ ನಂಬರ್ ಮೈಸೂರು ಗೆಜೆಟ್ ಇಸ್ತಿಹಾರ್ ನಾಮೆ ಪ್ರಕಾರ ಯಿರತಕ್ಕದ್ದು.

G. J. VAN SOMEREN, *Captain,*
Conservator of Forests, Mysore & Coorg.

NUNDYDROOG DIVISION.

ತಾರೀಖು 10ನೇ ಮಾರ್ಚೀ 1876.

ಇದರಿಂದ ಸರ್ವರಿಗೂ ತಿಳಿಯುವಬಗ್ಗೆ ಪ್ರಕಟಿಸುವ ದೇನಂದರೆ, ಈಕೆಳಗೆ ವಿವರಿಸುವ ಜಮ್ಮಿ ಸರ್ಕಾರ್ ಹುಕುಂ ಮೂಲಕ ಮಾಪೇ ಮಜಕೂರು 20ನೇ ತಾರೀಖು ಬೆಳಿಗ್ಯೆ 7 ಘಂಟೆಯ ನೊದಲು 10 ಘಂಟೆಯ ವರಿಗೆ ಮೂರು ತುಂಡುಗಳಾಗಿ ವಿಕ್ರಯಿಸಲ್ಪಡುತ್ತೆ.

2. ಸದರೀ ತುಂಡುಗಳು ಸದರೀ ಸ್ಥಳದಲ್ಲಿಯೇ ಪ್ರತ್ಯೇಕ ಪ್ರತ್ಯೇಕವಾಗಿ, ಬೆಂಗಳೂರು ತಾಲ್ಲೂಕು ಅವುಲ್‌ದಾರ್‌ರಿಂದ ಹರಾಜ್ ಹಾಕಲ್ಪಡುತ್ತೆ. ಯಾರ ದರಖಾಸ್ತು ಮುಂಜೂರಾಗುತ್ತೋ ಆ ಮನುಷ್ಯನು ಆಯಾ ತುಂಡು ಹರಾಜ್ ಆದಕೂಡ್ಲೇ ದರಖಾಸ್ತು ವೊಬಲಗು ಪೈಕೀ ನೇಕಡಾ 25 ರೂಪಾಯಿ ಡಿಪಾಜಿಟ್ ಯಿಡತಕ್ಕದ್ದು, ಮತ್ತು ಬಾಕೀ ವೊಬಲಗಿಗೆ ಮಾತಬರ್ ಜಾಮ್ಮಿ ಕೊಟ್ಟು, ಅದನ್ನು ಮಾಹೇ ಮಜಕೂರು 24ನೇ ಮುಕ್ತಂ ಬೆಳಿಗ್ಯೆ 11 ಘಂಟೆಗೆ ಮುಂದಾಗಿಯೇ ಪೂರಾ ನಂದಾಯ ಮಾಡಬೇಕು. ಹಾಗೆಮಾಡದೆ ಹೋದರೆ ಸದರೀ ಜಮ್ಮಿ ಪುನಶ್ಚ ವಿಕ್ರಯಿಸಲ್ಪಟ್ಟು ಆದರಿಂದ ಬರುವ ನಷ್ಟಕ್ಕೆ ಆವ್ವಲ್ ದರಖಾಸ್ತುದಾರನೂ ಅವನ ಜಾಮ್ಮೀದಾರನೂ ಗುರಿ ಮಾಡಲ್ಪಟ್ಟ್ಯಾರು. ಹಾಗೆ ಪುನಶ್ಚ ಹರಾಜ್ ಹಾಕುವದರಿಂದ ಬರುವ ಯಾವ ನುಕ್ಸಾನಾಗಲಿ ಅವರು ಕೊಡಬೇಕಾಗುವದು.